JETIR.ORG ISSN: 2349-5162 | ESTD Year : 2014 | Monthly Issue
JOURNAL OF EMERGING TECHNOLOGIES AND INNOVATIVE RESEARCH (JETIR)
An International Scholarly Open Access, Peer-reviewed, Refereed Journal

# ಕೃಷಿ ಸಂಸ್ಕೃತಿಯ ಆಚರಣೆ

ಡಾ. ಸುರೇಶ ಕೆ.ಸಿ
ಸಹ ಪ್ರಾಧ್ಯಾಪಕರು
ಕೆ.ಎಲ್.ಇ ಸಂಸ್ಥೆಯ
ಎಸ್. ನಿಜಲಿಂಗಪ್ಪ ಕಾಲೇಜು
ಬೆಂಗಳೂರು–೫೬೦೦೧೦

ಸಂಸ್ಕೃತಿ ಎಂದರೆ ಸಮುದಾಯ ಒಂದರ ಜೀವನ ಕ್ರಮ, ಬದುಕುತ್ತಿರುವ ರೀತಿ ಎಂದು ಹೇಳಬಹುದಾದರೆ ತನ್ನ ಪಾರಂಪರಿಕ ಕೃಷಿಜ್ಞಾನ ಮತ್ತು ಕೃಷಿಯ ಸಾಂಸ್ಕೃತಿಕ ಪರಿಸರದ ಅಂದಿನ ರೈತನ ಬದುಕು ಮತ್ತು ಖಾಸಗೀಕರಣ, ಉದಾರೀಕರಣ, ಕಂಪ್ಯೂಟರೀಕರಣಗಳಂತಹ ಹೊಸ ನೆಲೆಗಳಲ್ಲಿ ಮನುಷ್ಯನ ಅಸ್ತಿತ್ವದ ಬುಡವನ್ನೇ ಅಲುಗಾಡಿಸಿ, ಲಾಭದಾಯಕವಲ್ಲದ ಕೃಷಿ, ಮಳೆಯ ಕೊರತೆಯ ಜೊತೆಗೆ ಅಕಾಲಿಕ ಮಳೆಯಿಂದಾಗುವ ಅನಾಹುತ, ಸಕಾಲಕ್ಕೆ ಸಿಗದ ಬಿತ್ತನೆ ಬೀಜ, ರಸಗೊಬ್ಬರದ ಆಭಾವದ, ತೀವ್ರ ಸಮಸ್ಯೆಯ ಸುಳಿಯಲ್ಲಿ ಸಿಲುಕಿರುವ ಇಂದಿನ ರೈತನ ಬದುಕು ಮತ್ತು ಸಾಂಸ್ಕೃತಿಕ ಪರಿಸರದ ಒಂದು ತುಲನಾತ್ಮಕವಾದ ನೋಟ ಈ ಪ್ರಬಂಧದ ವಿಷಯವಾಗಿದೆ. ಮನುಷ್ಯ ಜೀವಿಸುವುದಕ್ಕೆ ಬೇಕಾದ ಮೂಲಭೂತ ಅಗತ್ಯಗಳಲ್ಲಿ ಆಹಾರವೂ ಒಂದು. ಮನುಕುಲದ ವಿಕಾಸದ ಹಂತದಲ್ಲಿ –ಮನುಷ್ಯ ತನಗೆ ಬೇಕಾದ ಆಹಾರವನ್ನು ಪಡೆದುಕೊಂಡ ಬಗೆಯನ್ನು ಡಿ.ಡಿ. ಕೋಸಂಬಿ ಮತ್ತು ದೇವಿಪ್ರಸಾದ ಚಟ್ಟೋಪಾಧ್ಯಾಯ ಮೊದಲಾದ ವಿದ್ವಾಂಸರು ಎರಡು ಪ್ರಮುಖ ಹಂತಗಳಲ್ಲಿ ಗುರುತಿಸಿದ್ದಾರೆ.

**೧. ಆಹಾರ ಸಂಗ್ರಹಣೆಯ ಹಂತ :** ಈ ಹಂತ ಮನುಕುಲದ ಆರಂಭಿಕ ಕಾಲವಾಗಿದ್ದು, ಮನುಷ್ಯರು ಗುಂಪು ಗುಂಪಾಗಿ ಜೀವನ ನಡೆಸುತ್ತಿದ್ದರು. ಭೂಮಿಯ ಮೇಲೆ ತಾನಾಗಿ ಏನು ದೊರೆಯುತ್ತಿತ್ತೋ ಅದನ್ನೇ ಮಾತ್ರ ತಿಂದು ಜೀವಿಸಬೇಕಾದ ಅನಿವಾರ್ಯತೆ ಇತ್ತು. ಹಾಗಾಗಿ ಈ ಹಂತದ ಮನುಷ್ಯರು ಆಹಾರಕ್ಕಾಗಿ ಸಂಪೂರ್ಣವಾಗಿ ನಿಸರ್ಗವನ್ನೇ ಅವಲಂಬಿಸಿದ್ದರು. ಕಾಡಿನಲ್ಲಿ ಅಲೆದಾಡಿ ಸಿಕ್ಕ ಗೆಡ್ಡೆ – ಗೆಣಸು, ಹಣ್ಣು ಹಂಪಲುಗಳನ್ನು ಸಂಗ್ರಹಿಸಿ ತಮ್ಮ ಹಸಿವನ್ನು ನೀಗಿಸಿಕೊಳ್ಳುತ್ತಿದ್ದರು. ಕಾಲಾನಂತರದಲ್ಲಿ ಬೇಟೆಯಾಡುವುದನ್ನು ಕಲಿತ ಮೇಲೆ ಕಾಡಿನ ಪ್ರಾಣಿ, ಪಕ್ಷಿಗಳನ್ನು ತಿಂದು ಬದುಕುತ್ತಿದ್ದರು. ತಾವು ಸಂಗ್ರಹಿಸಿದ ಆಹಾರವನ್ನು ಹಂಚಿಕೊಂಡು ತಿನ್ನುವ ರೂಢಿಯು ಇವರಲ್ಲಿತ್ತು.

**೨. ಆಹಾರ ಉತ್ಪಾದನೆಯ ಹಂತ:** ಈ ಹಂತದಲ್ಲಿ ಮನುಷ್ಯರು ಸಾಧಿಸಿದ ಮೊಟ್ಟ ಮೊದಲ ಸಾಧನೆ ಎಂದರೆ ಕೃಷಿಯ ಆವಿಷ್ಕಾರ. ಬೆಂಕಿ, ಕೃಷಿ ಮತ್ತು ಚಕ್ರದ ಅವಿಷ್ಕಾರಗಳು ಮಾನವ ನಾಗರೀಕತೆಯ ಜೀವನಕ್ಕೆ ಹಾಕಿದ ಅಡಿಪಾಯ ಎಂದರೆ ತಪ್ಪಾಗುವುದಿಲ್ಲ. ಆಹಾರ ಗಳಿಕಗಾಗಿಯೇ ತನ್ನ ಬಹುಕಾಲವನ್ನು ವ್ಯಯ ಮಾಡುತ್ತಿದ್ದ ಮಾನವನಿಗೆ ಕೃಷಿಯನ್ನು ಕಂಡು ಹಿಡಿದ ನಂತರ, ತನ್ನ ಆಲೋಚನಾ ಶಕ್ತಿಯನ್ನು ಬೆಳೆಸಿಕೊಳ್ಳಲು ಈ ಕಾಲವನ್ನು ಬಳಸಿಕೊಂಡಿದ್ದು ಮಾನವ ನಾಗರೀಕತೆಯ ಅವಿಚ್ಛಿನ್ನ ಕ್ಷಣವೆನ್ನಬಹುದು. ಆಹಾರ ಸಂಗ್ರಹಣೆ ಮತ್ತು ಪಶು ಸಂಗೋಪನೆಯನ್ನು ಮಾಡುತ್ತಿದ್ದ ಮಾನವರು ಪ್ರಾಣಿಗಳಂತೆ ಋತುಗಳನ್ನು ಅನುಸರಿಸಿ ಸ್ಥಳದಿಂದ ಸ್ಥಳಕ್ಕೆ ಆಹಾರವನ್ನು ಅರಸುತ್ತಾ ಅಲೆಯುತ್ತಿದ್ದರು. ಹೀಗೆ ಅಲೆಮಾರಿಯಾಗಿದ್ದ ಮನುಷ್ಯರು ವ್ಯವಸಾಯವನ್ನು ರೂಢಿಸಿಕೊಂಡ ನಂತರ ಒಂದು ನಿರ್ದಿಷ್ಟ ಪ್ರದೇಶದಲ್ಲಿ ನೆಲೆಯೂರಲು ಪ್ರಾರಂಭಿಸಿದರು. ಉತ್ಪಾದನೆಯ ಕಲೆಯನ್ನು ಕರಗತ ಮಾಡಿಕೊಂಡ ಮೇಲೆ ಮನುಷ್ಯ, ಜೀವಿಗಳ ಭೂಮಿಯನ್ನು ತಮ್ಮ ಹತೋಟಿಗೆ ತಂದುಕೊಂಡು ತಮಗೆ ಬೇಕಾದ ಬೆಳೆ ಬೆಳೆಯುವುದಕ್ಕೆ ಪ್ರಾರಂಭಿಸಿದರು.

**ಕೃಷಿ ಮತ್ತು ಮಹಿಳೆ**

ಮನುಷ್ಯ ಬೇಟೆಯ ಕಲೆಯನ್ನು ಕಲಿಯುವುದಕ್ಕೆ ಮುಂಚೆ ಮನುಷ್ಯರು ಗುಂಪು ಜೀವನ ನಡೆಸುತ್ತಿದ್ದರು. ಆಗ ಸ್ತ್ರೀ ಪುರುಷರ ನಡುವೆ ಕೆಲಸದ ವಿಭಜನೆಯೇನೂ ಆಗಿರಲಿಲ್ಲ. ಎಲ್ಲರೂ ಗೆಡ್ಡೆ ಗೆಣಸು, ಹಣ್ಣು ಹಂಪಲಗಳನ್ನು ಸಂಗ್ರಹಿಸುತ್ತಿದ್ದರು. ಆದರೆ ಮನುಷ್ಯ ಬೇಟೆಯ ಕಲೆಯನ್ನು ಕಲಿತ ನಂತರ ಕಾಡಿನಲ್ಲಿ ಬೇಟೆಗಾಗಿ ಅಲೆಯುವ ಕೆಲಸ ಪುರುಷನದ್ದಾಯಿತು. ಸ್ತ್ರೀಯು ಮಕ್ಕಳ ಲಾಲನೆ ಪಾಲನೆಯ ಜವಾಬ್ದಾರಿಯನ್ನು ಹೊತ್ತಿದ್ದರಿಂದ ತಮ್ಮ ವಸತಿಯ ಸುತ್ತ ಮುತ್ತಲೇ ಆಹಾರ ಸಂಗ್ರಹಣೆಯ ಪ್ರಯತ್ನ ನಡೆಸುತ್ತಿದ್ದರು. "ಕಾಡಿನಲ್ಲಿ ಹಣ್ಣು ಹಂಪಲ ಇತ್ಯಾದಿಗಳನ್ನು ಸಂಗ್ರಹಿಸುವ ಸಂದರ್ಭದಲ್ಲಿ ಸ್ತ್ರೀಯರು ಕಾಲಾನುಕ್ರಮದಲ್ಲಿ ತಾವು ಅಲ್ಲಲ್ಲಿ ಎಸೆದಿದ್ದ ಬೀಜಗಳು ಮೊಳಕೆಯೊಡೆದು ಮೊಳಕೆಯಿಂದ ಸಸಿ ಬೆಳೆದುದ್ದನ್ನು ಕಂಡರು. ಈ ಜ್ಞಾನವೇ ಕೃಷಿಯ ಅವಿಷ್ಕಾರಕ್ಕೆ ಮೊದಲ ಹೆಜ್ಜೆಯಾಗಿರಬಹುದು." (ಮತ್ತೊಂದು ಮಾನ್ಯರಾಗಿದ್ದಾರೆ – ದೇವಿ ಪ್ರಸಾದ ಚಟ್ಟೋಪಾಧ್ಯಾಯ ೧೯೬೭ ಪುಟ ೨೩) ಹೀಗೆ ಮಹಿಳೆಯ ಕೃಷಿ ಅವಿಷ್ಕಾರ ಮಾಡಿದ್ದು ಎಂದು ಹೇಳಬಹುದು. ಗಂಡಸರು ಬೇಟೆಯಾಡುತ್ತಿದ್ದ ಸಂದರ್ಭದಲ್ಲಿ ಅಂದರೆ ಕೃಷಿ ಆವಿಷ್ಕಾರದ ಆರಂಭದ ದಿನಗಳಲ್ಲಿ ವ್ಯವಸಾಯದ ಕೆಲಸವನ್ನು ಪೂರ್ತಿಯಾಗಿ ಸ್ತ್ರೀಯರೇ ನಿರ್ವಹಿಸಿಕೊಂಡು ಹೋಗುತ್ತಿದ್ದರು. ಆಗ ಕೃಷಿಯನ್ನು ಮಹಿಳೆಯರು ಪುರುಷರ ಸಹಾಯ, ಸಹಕಾರಗಳಿಲ್ಲದೇ ಸ್ವತಂತ್ರವಾಗಿ ನಿರ್ವಹಿಸುತ್ತಿದ್ದರೆಂದು ತಿಳಿಯಲಾಗಿದೆ. "ಎತ್ತು ಮತ್ತು ನೇಗಿಲುಗಳನ್ನು ಬಳಸಿ ವ್ಯವಸಾಯ ಮಾಡುವ ಸ್ಥಿತಿಯನ್ನು ಮನುಷ್ಯ ಯಾವಾಗ ತಲುಪಿದನೋ ಆಗ ವ್ಯವಸಾಯದ ಸ್ತ್ರೀಯರ ಪರಿಮಿತಿಯಿಂದ ದೂರವಾಯಿತು. ಅದು ಸ್ತ್ರೀಯರಿಂದ ಪುರುಷರ ಕೈಗೆ ಬಂದು, ವ್ಯವಸಾಯ ಸ್ತ್ರೀಯರಿಂದ ಅವಿಷ್ಕಾರಗೊಂಡಿದ್ದರೂ ಮುಂದೆ ಅದು, ಅವರದೇ ಆಗಿ ಉಳಿಯಲಿಲ್ಲ." (ಅದೇ ಪುಟ ೨೪)

ಅಂದು ಮಹಿಳೆಯಿಂದ ಆರಂಭವಾದ ಕೃಷಿ ಇಂದು ಬಹಳ ವೈವಿಧ್ಯಮಯವಾಗಿ ಬೆಳೆದು ನಿಂತಿರುವುದನ್ನು ಕಾಣುತ್ತೇವೆ. ಕೃಷಿಯಲ್ಲಿ ಹೆಚ್ಚು ಹೆಚ್ಚು ಬಳಕೆಯಾಗುತ್ತಿರುವುದರಿಂದ ಆ ಯಂತ್ರಗಳು ಮಹಿಳೆಯರ ದುಡಿಮೆಯ ಸ್ಥಾನವನ್ನು ಆಕ್ರಮಿಸಿಕೊಂಡಿರುವುದರಿಂದ ಕೃಷಿಯಲ್ಲಿನ ಮಹಿಳೆಯ ಪಾಲುದಾರಿಕೆಯನ್ನು ಕಡಿತಗೊಳಿಸುತ್ತವೆ. ಮಹಿಳೆ, ಬಿತ್ತುವ, ಕಳೆ ತೆಗೆಯುವ, ಕೊಯ್ಯುವ, ಒಕ್ಕುವ ಧಾನ್ಯಗಳನ್ನು ಕೇರುವ (ಹಸನುಗೊಳಿಸುವ) – ಇತ್ಯಾದಿ ಕೃಷಿ ಕೆಲಸಗಳಲ್ಲಿ ಸಕ್ರಿಯವಾಗಿ ಭಾಗಿಯಾಗುತ್ತಿದ್ದಳು, ಆದರೆ ಗರೆ ಹೊಡೆದು (ಹೊಲ ಉಳುವುದು) ಏಕ ಕಾಲದಲ್ಲಿ ಬಿತ್ತುವ ಯಂತ್ರಗಳು ಬಳಕೆಯಾಗುವುದರಿಂದ ಅಲ್ಲಿ ಬಿತ್ತುವ ಕ್ರಿಯೆಯಿಂದ ಹೆಣ್ಣು ದೂರ ಉಳಿಯುತ್ತಿದ್ದಾಳೆ. ತಂತ್ರಜ್ಞಾನ ಬೆಳೆದಂತೆ ಹೆಚ್ಚು ಹೆಚ್ಚು ತಿಳುವಳಿಕೆ ಹೊಂದುತ್ತಿರುವ ಮನುಷ್ಯರು ಮುಂಜಾಗೃತರಾಗಿ ಕೃಷಿಯಲ್ಲಿ ಹಲವು ತಂತ್ರಜ್ಞಾನಗಳನ್ನು ಉಪಯೋಗಿಸುತ್ತಿರುವರು. ಹೊಲದಲ್ಲಿ ಬೆಳೆಯುವ ಕಳೆಯ ನಿವಾರಣೆಗಾಗಿ ಬಳಸುವ ಕಳೆನಾಶಕ ರಾಸಾಯನಿಕಗಳು ಕೃಷಿಯ ಅಭಿವೃದ್ಧಿ ಸೂಚಕಗಳಾಗಿದ್ದರೂ ಕೂಡ ಅವು ಮಹಿಳೆಯ ಕೆಲಸವನ್ನು ಆಕ್ರಮಿಸಿಕೊಂಡಿವೆ. ಕೃಷಿಯಲ್ಲಿ ಕಳೆ ತೆಗೆಯುವ ಕೆಲಸ ಸಾಮಾನ್ಯವಾಗಿ ಮಹಿಳೆಯರಿಂದಲೇ ನಿರ್ವಹಿಸಲ್ಪಡುತ್ತದೆ. ಆದರೆ ಇಂದು ಕಳೆನಾಶಕ ಔಷಧಿಗಳು ಇಲ್ಲವೆ ಕಳೆ ತೆಗೆಯುವ ಯಂತ್ರ ಬಳಸುವುದರಿಂದ ಹತ್ತಾರು ಜನ ಮಹಿಳೆಯರು ಆ ಕೆಲಸದಿಂದ ವಂಚಿತರಾಗುತ್ತಿರುವುದನ್ನು ನಾವು ಗಮನಿಸಬಹುದು. ಅದೇ ರೀತಿ ಬೆಳೆಯನ್ನು ಕಟಾವು ಮಾಡುವ ಅಥವಾ ಕೊಯ್ಯುವುದಕ್ಕೆ ಯಂತ್ರಗಳು ಬಂದಿವೆ, ಇವೂ ಕೂಡ ಕೃಷಿ ಕಾರ್ಮಿಕರ ಕೆಲಸವನ್ನು ಕಬಳಿಸುತ್ತಿವೆ. ಹೆಚ್ಚಾಗಿ ಮಹಿಳಾ ಕೂಲಿ ಕಾರ್ಮಿಕರಿರುವುದರಿಂದ ಅವರ ಕೆಲಸ ಮೇಲೆ ಹೆಚ್ಚಾಗಿ ಪರಿಣಾಮ ಬೀರುತ್ತಿದೆ. ಅಲ್ಲದೇ, ವಾಸ್ತವವಾಗಿ ಕೆಳವರ್ಗದ ಮತ್ತು ಮಧ್ಯಮ ವರ್ಗದ ಜನ ತಮ್ಮ ಜೀವನ ನಿರ್ವಹಣೆಗಾಗಿ ಅಥವಾ ಕುಟುಂಬದ ನಿತ್ಯ ಖರ್ಚಿಗಾಗಿ ಕೆಲಸ ಮಾಡಲೇಬೇಕಾದ ಅನಿವಾರ್ಯತೆ ಇರುತ್ತದೆ. ಆದರೆ ಉನ್ನತ ಅಥವಾ ಮೇಲ್ವರ್ಗದ ಮಹಿಳೆಯರ ಸ್ಥಿತಿ ಇದಕ್ಕೆ ಹೊರತಾದುದ್ದಾಗಿರುತ್ತದೆ. ಇವರಿಗೆ ಕೆಲಸದ ಅನಿವಾರ್ಯತೆ ಇಲ್ಲ. ಇಂದು ಮೇಲ್ವರ್ಗದ ಪುರುಷ ತನ್ನ ಕುಟುಂಬದ ಹೆಣ್ಣು ಹೊರಕ್ಕೆ ಕಳುಹಿಸದಿರುವುದೇ ಒಂದು ಪ್ರತಿಷ್ಠೆಯ ಸಂಕೇತ ಎಂದು ಭಾವಿಸಿದ್ದಾನೆ. ತನ್ನ ಮನೆಯ ಹೆಣ್ಣು ಮಕ್ಕಳನ್ನು ಹೊಲಕ್ಕೆ ಕಳುಹಿಸುವುದು ಎಂದರೆ ಅದೊಂದು ಅವಮಾನದ ಸಂಗತಿ ಎಂದು ಕೆಲವು ಕಡೆ ಜನ ಭಾವಿಸಿದ್ದರಿಂದ ಮೇಲ್ವರ್ಗದ ಮಹಿಳೆಯರು ಕೃಷಿಯಿಂದ ದೂರ ಉಳಿದಿದ್ದಾರೆ. ಮತ್ತೊಂದೆಡೆ ಸ್ವತಃ ಮಹಿಳೆಯರಿಗೆ (ಹೊಸ ತಲೆಮಾರಿನ) ಕೃಷಿಯ ಬಗೆಗೆ ನಿರ್ಲಕ್ಷ್ಯ ಬೆಳೆಯುತ್ತಿದ್ದಂತೆ ಕಂಡು ಬರುತ್ತದೆ. ಇತ್ತೀಚೆಗೆ ಮಹಿಳೆಯರಲ್ಲಿ ಕೃಷಿಯನ್ನು ನಿಕೃಷ್ಟವಾಗಿ ಕಾಣುವ ಮನೋಭಾವ ಬೆಳೆಯುತ್ತಿದೆ ಎಂಬುದನ್ನು ಈ ಕೆಳಗಿನ ನಿದರ್ಶನದಿಂದ ಸ್ಪಷ್ಟಪಡಿಸಬಹುದು. ಇಂದಿನ ಮಹಿಳೆಯರು ಕೃಷಿ ಕಾರ್ಮಿಕನಾದ ರೈತನನ್ನು ಮದುವೆಯಾಗಲು ಹಿಂಜರಿಯುತ್ತಿದ್ದಾರೆ. ಅವನು ಎಷ್ಟೇ ಪ್ರಗತಿಪರ ರೈತನಾಗಿದ್ದರೂ ಆತನನ್ನು ಮದುವೆಯಾಗಲು (ಈಗಿನ ಹೆಣ್ಣು ಮಕ್ಕಳು) ಹಿಂದೇಟು ಹಾಕುತ್ತಿದ್ದಾರೆ. ಈ ಸಂಗತಿಯು ಕೃಷಿ ಇಂದು ಅಷ್ಟು ಮನ್ನಣೆಯನ್ನು ಪಡೆದ ಕಸುಬಾಗಿ ಉಳಿದಿಲ್ಲ ಎಂಬುದನ್ನು ತಿಳಿಸುತ್ತದೆ. ಸಾಮಾಜಿಕವಾಗಿ ಕೃಷಿ ಇಂದು ಅವಗಣನೆಗೆ ಒಳಗಾಗುತ್ತಿದೆ.

**ಕೃಷಿ ಮತ್ತು ಪುರುಷ**

ಬರಿ ಸ್ತ್ರೀಯರಷ್ಟೇ ಅಲ್ಲ ಪುರುಷರೂ ಕೂಡ ಇಂದಿನ ಆಧುನಿಕ ದಿನಮಾನಗಳಲ್ಲಿ ಕೃಷಿಯ ಬಗ್ಗೆ ನಿರಾಸಕ್ತಿಯನ್ನು ತೋರಿಸುತ್ತಿದ್ದಾರೆ. "ವ್ಯವಸಾಯ ಉತ್ತಮ, ವ್ಯಾಪಾರ ಮಧ್ಯಮ, ನೌಕರಿ ಕನಿಷ್ಟ" ಎಂಬ ಗಾದೆ ಮಾತಿನಂತೆ ಹಿಂದೆ ವ್ಯವಸಾಯ ಬಹಳ ಗೌರವಯುತವಾದ ಪವಿತ್ರವಾದ ಕೆಲಸವಾಗಿತ್ತು. ಅಂದು ಕೃಷಿ ಕುಟುಂಬದ ಸದಸ್ಯರಲ್ಲಿ ಯಾರಿಗಾದರೂ ಸರ್ಕಾರಿ ನೌಕರಿ ಸಿಕ್ಕರೂ ಅವರನ್ನು ನೌಕರಿಗೆ ಕಳುಹಿಸುತ್ತಿರಲಿಲ್ಲ. "ನೌಕರಿ' ಎಂದರೆ ಬೇರೆಯವರ ಕೈಕೆಳಗೆ ಕೆಲಸ ಮಾಡುವುದಕ್ಕಿಂತಲೂ ಸ್ವಂತ ಜಮೀನಿನಲ್ಲಿ ದುಡಿದು ಬದುಕುವುದು ಶ್ರೇಷ್ಠ ಎಂದು ಭಾವಿಸುತ್ತಿದ್ದರು. ಆದರೆ ಇಂದು ಪರಿಸ್ಥಿತಿ ಹಾಗೆ ಉಳಿದಿಲ್ಲ. ಕೃಷಿಯ ಬಗೆಗೆ ಮೊದಲಿದ್ದ ಅಭಿಪ್ರಾಯಗಳು ಈಗಿಲ್ಲ. ಕಾರಣ; ಸಮಾಜದಲ್ಲಿ ಮೊದಲ ಸ್ಥಾನವನ್ನು ಪಡೆದುಕೊಂಡಿದ್ದ ಕೃಷಿ; ಈಗ ನಷ್ಟದಾಯಕ, ಶ್ರಮದಾಯಕ ವೃತ್ತಿಯಾಗಿ ಪರಿಗಣಿಸಿದ್ದು, ಅದರಿಂದ ಅಧಿಕಶ್ರಮ ವಿನಿಯೋಗ ಆಗುತ್ತದೆಯೇ ಹೊರತು ಹೆಚ್ಚು ಲಾಭ ಬರದು ಎಂಬ ಭಾವನೆ ಬೆಳೆದು ಬಿಟ್ಟಿದೆ. ಹಾಗಾಗಿ ಕೃಷಿಯಿಂದ ಬೇರೆ ಉದ್ಯೋಗಗಳಿಗೆ ಅರಸಿ ಹೋಗುತ್ತಿರುವವರ ಸಂಖ್ಯೆ ಅಧಿಕವಾಗುತ್ತಿದೆ. ಇದಕ್ಕೆ ಉತ್ತಮ ನಿದರ್ಶನವೆಂದರೆ ಇವತ್ತಿನ ಗ್ರಾಮೀಣ ಪ್ರದೇಶದ ಹಳ್ಳಿಗಳಲ್ಲಿ ಯುವಕರುಗಳೇ ಇಲ್ಲವಾಗಿದ್ದಾರೆ. ಬಹುಪಾಲು ಯುವಜನತೆ ಕೃಷಿಯತ್ತ ಆಸಕ್ತಿ ತೋರದೆ ಕೃಷಿಯೇತರ ಉದ್ದೇಶಗಳಿಗಾಗಿ ಹಪಹಪಿಸುತ್ತಿರುವುದು ಉದ್ಯೋಗಗಿಟ್ಟಿಸುವ ಉದ್ದೇಶದಿಂದ ಪಟ್ಟಣಗಳ ಮೊರೆ ಹೋಗುತ್ತಿರುವುದು ಕಂಡು ಬರುತ್ತಿದೆ. ಅದೇ ರೀತಿ ಒಂದು ಗ್ರಾಮ ಇಲ್ಲವೆ ನಗರದಲ್ಲಿ ವಿವಿಧ ವೃತ್ತಿಗಳಲ್ಲಿ ತೊಡಗಿದ ಜನರನ್ನು ಗಮನಿಸಿದಾಗ ಸಾಮಾನ್ಯವಾಗಿ ಕಣ್ಣಿಗೆ ಕಾಣುವ ಸಂಗತಿಯೆಂದರೆ ವ್ಯವಸಾಯವನ್ನು ತನ್ನ ಕಸುಬನ್ನಾಗಿಯೇ ಅಥವಾ ವೃತ್ತಿಯನ್ನಾಗಿಯೇ ಅವಲಂಭಿಸಿರುವ ಕೃಷಿಕ ಕುಟುಂಬಗಳ ಸ್ಥಿತಿಗತಿಗಳು ಇನ್ನಿತರ ವೃತ್ತಿಯನ್ನು ಅಥವಾ ವ್ಯಾಪಾರ ಉದ್ದಿಮೆಗಳಲ್ಲಿ ತಮ್ಮನ್ನು ತೊಡಗಿಸಿಕೊಂಡ ಕುಟುಂಬದವರಿಗಿಂತಲೂ ಇವರ ಸ್ಥಿತಿ ಚಿಂತಾಜನಕವಾಗಿದೆ. ಇವರು ಎಷ್ಟು ದುಡಿದರೂ ಇವರಿಗೆ ಐಷಾರಾಮಿ ಜೀವನ ಎಂಬುದು ಕನಸಿನ ಮಾತೇ ಆಗಿದೆ. ಇವರು ಎಷ್ಟೇ ದುಡಿದರೂ ಅಷ್ಟೆ ಮುಂದಿನ ವರುಷಕ್ಕೆ ಮತ್ತೆ ಬೇಸಾಯ ಮಾಡಬೇಕಾದರೆ ಸಾಲ ಮಾಡಿಯೇ ಬೀಜ, ಗೊಬ್ಬರ ತೆಗೆದುಕೊಳ್ಳುವ ಪರಿಸ್ಥಿತಿ ಮಾತ್ರ ರೈತಾಪಿ ವರ್ಗಗಳಿಗೆ ತಪ್ಪಿಲ್ಲ.

**ಕೃಷಿ ಸಂಬಂಧಿ – ಆಚರಣೆಗಳು**

ಯಾವುದೇ ಸಂಸ್ಕೃತಿಯಲ್ಲಿ ಕಂಡು ಬರುವ ನಂಬಿಕೆ ಆಚರಣೆಗಳು ಒಂದು ರೀತಿಯಲ್ಲಿ ಆ ಸಂಸ್ಕೃತಿಯ ಅಭಿವ್ಯಕ್ತಿಯ ಮಾಧ್ಯಮಗಳಾಗಿವೆ. ಅದೇ ರೀತಿ ಯಾವುದೇ ಒಂದು ಸಮುದಾಯದ ನಂಬಿಕೆ ಆಚರಣೆಗಳು ಆ ಸಮುದಾಯದ ಪ್ರತಿಬಿಂಬಗಳೇ ಆಗಿವೆ. ಏಕೆಂದರೆ ಆ ಸಮುದಾಯ ಏನನ್ನು ಸತ್ಯ ಎಂದು ಭಾವಿಸಿರುತ್ತದೆಯೋ, ಏನನ್ನು ಒಪ್ಪಿರುತ್ತದೆಯೋ ಅವೇ ನಂಬಿಕೆಗಳಾಗಿ, ಆಚರಣೆಗಳಾಗಿ ರೂಪ ತಳೆದಿರುತ್ತವೆ. ಜೀವನ'ಕ್ಕೂ ಮತ್ತು ನಂಬಿಕೆಗೂ ನಿಕಟವಾದ ಸಂಬಂಧವಿದೆ. ಅವು ಆ ಸಮುದಾಯದ ಅನುಭವದ ಹಿನ್ನೆಲೆಯಲ್ಲಿ ರೂಪತಳೆದಂತವುಗಳಾಗಿವೆ. ನಂಬಿಕೆಗಳು ಬೇರ್ಪಡಿಸಲಾಗದ ಉತ್ಪನ್ನಗಳು. ಹೀಗಾಗಿ ಮಾನವ ಬದುಕಿಗೂ, ನಂಬಿಕೆಗೂ ಬೇರ್ಪಡಿಸಲಾಗದ ಸಂಬಂಧ ಇರುವುದರಿಂದ ಅವುಗಳನ್ನು ಅಧ್ಯಯನಕ್ಕೊಳಪಡಿಸುವ ಮೂಲಕ ಜನ ಜೀವನವನ್ನು ಅರಿಯಬಹುದಾಗಿದೆ. ಆದ್ದರಿಂದ ಒಂದು ಸಂಸ್ಕೃತಿ, ಸಮುದಾಯ ಎಂದರೆ ಕೃಷಿ ಸಂಸ್ಕೃತಿ ಮತ್ತು ಕೃಷಿಯನ್ನವಲಂಭಿಸಿರುವ ಕೃಷಿಕ ಸಮುದಾಯ ಎಂದೇ ಹೇಳಬಹುದು. ಮನುಕುಲ ಒಂದು ಕಡೆ ನೆಲೆ ನಿಂತು ವಾಸಿಸಲು ಪ್ರಾರಂಭಿಸಿದಾಗಿನಿಂದಲೂ ನಿರಂತರವಾಗಿ ನಡೆದು ತಲೆಮಾರಿನಿಂದ ತಲೆಮಾರಿಗೆ ಸಾಗಿಬಂದ ಈ ಕೃಷಿ ಸಂಸ್ಕೃತಿಯ ನಿರಂತರ ಚಟುವಟಿಕೆ, ಕೇವಲ ಶ್ರಮ ಹೂಡಿಕೆಯ ಮತ್ತು ಲಾಭಗಳಿಕೆಯ ವ್ಯವಹಾರವಾಗದೆ ಹತ್ತಾರು ನಂಬಿಕೆಗಳನ್ನು ತನ್ನ ಸುತ್ತ ಸೃಷ್ಟಿಸಿಕೊಂಡಿದೆ. ಇದೇ ಮನೋಭೂಮಿಕೆಯಲ್ಲಿ ಸಾಂಸ್ಕೃತಿಕ ವಲಯವನ್ನು ರೂಪಿಸಿಕೊಂಡಿದೆ. ಈ ಸಾಂಸ್ಕೃತಿಕ ವಲಯದಲ್ಲಿ ಅನೇಕ ದೈವಗಳಿವೆ, ನಂಬಿಕೆಗಳಿವೆ, ಆಚರಣೆಗಳಿವೆ. ಏಕೆಂದರೆ ಜೀವನ ನಿರ್ವಹಣೆಗಾಗಿ ಕೃಷಿಯನ್ನು ಅವಲಂಬಿಸಿ ಬದುಕುತ್ತಿದ್ದ ಮನುಷ್ಯರಿಗೆ ಭೂಮಿ ಮತ್ತು ಭೂಮಿಯ ಮೇಲೆ ಬೆಳೆಯುವ ಬೆಳೆ ಮುಖ್ಯವಾಗುತ್ತದೆ. ತಾನು ಬಿತ್ತಿದ ಬೆಳೆ ಸುರಕ್ಷಿತವಾಗಿ ತನ್ನ ಕೈ ಸೇರಬೇಕೆಂಬ ಅಭಿಲಾಷೆಯನ್ನು ಹೊಂದಿರುವ ಕೃಷಿಕರು ಪ್ರಕೃತಿಯ ಬಗೆಗೆ ನಿರಂತರವಾಗಿ ಆತಂಕವನ್ನು ಹೊಂದಿದವರಾಗಿರುತ್ತಾರೆ. ಏಕೆಂದರೆ ಮನುಷ್ಯ ಎಷ್ಟೇ ವೈಚಾರಿಕವಾಗಿ ಮುಂದುವರೆದರೂ ನಿಸರ್ಗದ ಕೆಲವು ಪ್ರಕ್ರಿಯೆಗಳು ಅವರ ಕೈಮೀರಿದವುಗಳಾಗಿವೆ. ಹಾಗಾಗಿ ಕೃಷಿಕರು ಮಳೆಗಾಗಿ, ಬೆಳೆದ ಬೆಳೆಯ ರಕ್ಷಣೆಗಾಗಿ ಅಥವಾ ಸಮೃದ್ಧವಾಗಿ ಉತ್ತಮ ಫಸಲು ಬೆಳೆಯಲೆಂದು ನಿಸರ್ಗವನ್ನು ವಿವಿಧ ಬಗೆಯಲ್ಲಿ ಭಯ, ಭಕ್ತಿಯಿಂದ ಆರಾಧಿಸಿಕೊಂಡು ಬಂದಿರುವರು. ಈ ಆರಾಧನೆಯ ಮನೋಭಾವದಿಂದಲೇ ನಮ್ಮಲ್ಲಿ ಇಂದು ಅನೇಕ ಕೃಷಿ ಸಂಬಂಧಿ ದೈವಗಳಿರುವುದು ಕಂಡು ಬರುತ್ತದೆ. ಅಲ್ಲದೆ ಅವುಗಳಿಗೆ ಸಂಬಂಧಿಸಿದಂತೆ ನಡೆಯುವ ಅನೇಕ ನಂಬಿಕೆ ಆಚರಣೆಗಳು ಕಂಡು ಬರುತ್ತವೆ. ಕೃಷಿಕರಿಗೆ ತಾವು ಬಿತ್ತಿ ಬೆಳೆಯುವ ಭೂಮಿಯ ಬಗೆಗೆ ಮತ್ತು ತಮ್ಮೊಂದಿಗೆ ದುಡಿಯುವ

ಎತ್ತುಗಳ ಬಗೆಗೆ ಗೌರವ ಭಾವನೆ ಇದೆ. ತನ್ನ ವೃತ್ತಿ ಮತ್ತು ಬದುಕಿನ ಭಾಗವೇ ಆದ ಇವುಗಳ ಬಗೆಗೆ ದೈವತ್ವ ಭಾವನೆ ಇರಿಸಿಕೊಂಡಿದ್ದಾನೆ. ಯಾವಾಗಲೂ ರೈತರು ಕೃತಜ್ಞತಾ ಭಾವನೆ ಹೊಂದಿದವರಾಗಿರುತ್ತಾರೆ. ಈ ಕೃತಜ್ಞತೆಯನ್ನು ಕೆಲವು ಆಚರಣೆಗಳ ಮೂಲಕ ವ್ಯಕ್ತಪಡಿಸಿರುವುದು ಕಂಡು ಬರುತ್ತದೆ. ಅಂತಹ ಆಚರಣೆಗಳಲ್ಲಿ ಯುಗಾದಿ ದಿನಕ್ಕೆ ವಿಶೇಷ ಸ್ಥಾನವಿದೆ. ಯುಗಾದಿಯನ್ನು ರೈತರು ತಮ್ಮ ಕೆಲಸಗಳು ಪ್ರಾರಂಭಿಸುವುದಕ್ಕೆ ಶುಭದಿನವೆಂದು ನಂಬಿರುತ್ತಾರೆ. ಆ ದಿನ ಹೊಲದ ಪೂಜೆ ಮಾಡಿ, ಹೊಲವನ್ನು ನೇಮಕ್ಕಾಗಿಯಾದರೂ ಐದು ಸಾಲು ಉಳುಮೆ ಮಾಡಿ ಬರುತ್ತಾರೆ. ಇದು ತಮ್ಮ ಕೆಲಸಕ್ಕೂ ಪೂರ್ವದಲ್ಲಿ ಭೂಮಿಗೆ ರೈತರು ತೋರುವ ಕೃತಜ್ಞತೆಯಾಗಿದೆ. ಸೀಗಿಹುಣ್ಣಿಮೆಯ ಆಚರಣೆಯಲ್ಲಿ ಭೂಮಿಯನ್ನು ಒಂದು ಹೆಣ್ಣು ಎನ್ನುವ ಪರಿಕಲ್ಪನೆಯಿಂದ ಪೂಜಿಸಲಾಗುತ್ತದೆ. ಆ ದಿನ ಎಳ್ಳು ಹಚ್ಚಿದ ಜೋಳದ ರೊಟ್ಟಿ, ಸಜ್ಜೆರೊಟ್ಟಿ, ಗೋದಿಯ ಹುಗ್ಗಿ, ಅಕ್ಕಿ ಹುಗ್ಗಿ, ಕುಂಬಳಕಾಯಿ ಪಲ್ಯ, ಪುಂಡಿಪಲ್ಯ, ಎಣ್ಣೆಗಾಯಿ, ಹುರಕ್ಕಿ ಹೋಳಿಗೆ, ಕರ್ಚಿಕಾಯಿ ಈ ಎಲ್ಲಾ ಪದಾರ್ಥಗಳನ್ನು ಸ್ವಲ್ಪ ಸ್ವಲ್ಪ ತೆಗೆದುಕೊಂಡು ಹೊಲದ ತುಂಬೆಲ್ಲ ['ಹುಲಗೋ ಹುಲಗೋ' ಎಂದು) ಎರಚುವರು. ಇದನ್ನು ಚರಗ ಚೆಲ್ಲುವುದು ಎನ್ನುತ್ತಾರೆ. ಈ ರೀತಿಯಾಗಿ ಮಾವನ ಸಹಜವಾದ ಗರ್ಭಿಣಿ ಸ್ತ್ರೀಯ ಬಯಕೆಯನ್ನು ಭೂಮಿಗೂ ಉಣಬಡಿಸುವ ಪ್ರಕ್ರಿಯೆಯನ್ನು ಕಾಣುತ್ತೇವೆ. ಮಣ್ಣು ಮತ್ತು ಎತ್ತುಗಳಿಗೆ ಕೃತಜ್ಞತಾ ರೂಪದಲ್ಲಿ ಆಚರಿಸಲ್ಪಡುವ 'ಮಣ್ಣೆತ್ತಿನ ಅಮಾವಾಸ್ಯೆ'ಯಂದು ಊರ ಮುಂದಿನ ಹೊಲ ಅಥವಾ ಕೆರೆಯ ಮಣ್ಣನ್ನು ತಂದು ಅದರಿಂದ ಎರಡು ಎತ್ತುಗಳನ್ನು ಮಾಡಿ ಅವುಗಳನ್ನು ದೇವರ ಜಗಲಿಯ ಮೇಲಿಟ್ಟು ಪೂಜೆ ಮಾಡಿ, ಕರಿಗಡುಬಿನ ಮತ್ತು ಹೋಳಿಗೆಯ ನೈವೈದ್ಯ ಮಾಡುವರು. ಈ ಸಂದರ್ಭದಲ್ಲಿ ಬಿತ್ತನೆ ಕಾರ್ಯ ಮುಗಿದು, ಬಿತ್ತಿದ ಬೀಜಗಳೆಲ್ಲ ಸಸಿಗಳಾಗಿ ತಲೆ ಎತ್ತಿ ನಿಂತಿರುತ್ತವೆ. ನೋಡಿದಲ್ಲೆಲ್ಲ ಹಸಿರು ತುಂಬಿರುವ ಭೂಮಿತಾಯಿಯ ನೋಟ ರೈತನ ಕಣ್ಮನಗಳಿಗೆ ಹಬ್ಬವನ್ನುಂಟು ಮಾಡುತ್ತದೆ. ಆ ಸಮಯದಲ್ಲಿ ಯಾವುದೇ ಬೇಸಾಯದ ಕೆಲಸವಿರದು, ದುಡಿದ ದೇಹಕ್ಕೆ ಸಂಪೂರ್ಣ ವಿಶ್ರಾಂತಿಯ ಕಾಲವದು. ಅಲ್ಲದೇ ತನ್ನೊಡನೆ ದುಡಿದು, ವಿಶ್ರಾಂತಿ ಪಡೆಯುತ್ತಿರುವ ಬಸವಣ್ಣನ ದುಡಿಮೆಯೇ ಇದಕ್ಕೆಲ್ಲ ಕಾರಣವೆಂದು ಭಾವಿಸಿ ಮಣ್ಣಿಗೂ ಬಸವಣ್ಣನಿಗೂ ಇರುವ ಸಂಬಂಧವನ್ನು ನೆನೆದು ಹಿಗ್ಗುತ್ತಾನೆ. ಅದೂ ಸಾಕಾಗದೇ ತನ್ನ ಹೊಲದ ಮಣ್ಣನ್ನೇ ಎತ್ತಿಕೊಂಡು ಬಸವಣ್ಣಗಳನ್ನು ಸಿದ್ಧಗೊಳಿಸಿ, ಪೂಜೆಗೈದು ಮಣ್ಣಿನ ಮೂಲಕ ತನ್ನ ಎತ್ತುಗಳಿಗೂ, ಎತ್ತುಗಳ ಮೂಲಕ ಮಣ್ಣಿಗೂ ತನ್ನ ಕೃತಜ್ಞತೆಯನ್ನು ವ್ಯಕ್ತಪಡಿಸುತ್ತಾನೆ. (ಎಸ್.ಎಂ.ಹರದಗಟ್ಟಿ, ೧೯೮೨ ಪುಟ ೬೭) ಅಂತೆಯೇ ಬಸವಜಯಂತಿ ರೈತನಿಗೆ ಸಂಭ್ರಮದ ದಿನ' ಆ ದಿನ ಯಾವ ರೈತರೂ ಭೂಮಿ ಉಳುವುದಿಲ್ಲ. ಆ ದಿನ ಎತ್ತುಗಳ ಮೈತೊಳೆದು ಅವುಗಳನ್ನು ಅಲಂಕರಿಸಿ, ಮೆರವಣಿಗೆ ಮಾಡುವರು. ಕಾರಹುಣ್ಣಿಮೆ ಕೃಷಿಗೆ ಸಂಬಂಧಿಸಿದ ಆಚರಣೆಯಾಗಿದೆ. ಈ ಹಬ್ಬದಲ್ಲಿ ಎತ್ತುಗಳನ್ನು ಚೆನ್ನಾಗಿ ಮೇಯಿಸಿ ವಿಶೇಷವಾಗಿ ಮೊಟ್ಟೆ, ಎಳ್ಳೆಣ್ಣೆಯನ್ನು ಹಾಕುತ್ತಾ, ಅವುಗಳಿಗೆ ಪೌಷ್ಠಿಕತೆ ಮತ್ತು ಕೊಬ್ಬಿನಾಂಶ ಇರುವುದರಿಂದ ಎತ್ತುಗಳು ಸಧೃಡವಾಗಿ ಬೆಳೆಯುತ್ತವೆ ಎನ್ನುವ ಕಾರಣಕ್ಕೆ ತಿನ್ನಿಸುತ್ತಾರೆ. ರೈತರ ದುಡಿಮೆಗೆ ಎತ್ತುಗಳೇ ಆಧಾರ. ಅವುಗಳು ಆರೋಗ್ಯವಾಗಿ ಚೆನ್ನಾಗಿದ್ದರೆ, ರೈತರ ಕೆಲಸವೂ ಚೆನ್ನಾಗಿ ಸಾಗುತ್ತದೆ. ಎತ್ತುಗಳ ಆರೋಗ್ಯವನ್ನು ಚೆನ್ನಾಗಿ ಕಾಯ್ದು ಕೊಳ್ಳುವುದೇ ಈ ಆಚರಣೆಯ ಉದ್ದೇಶವಾಗಿರಬಹುದು. ಕಾರಹುಣ್ಣಿಮೆಯಲ್ಲಿ ಎತ್ತುಗಳ ಓಟದ ಸ್ಪರ್ಧೆಯು ನಡೆಯುತ್ತದೆ. ತಮ್ಮ ಎತ್ತುಗಳೇ ಗೆಲ್ಲಬೇಕೆಂಬ ಸ್ಪರ್ಧಾ ಮನೋಭಾವದಿಂದ ಎತ್ತುಗಳನ್ನು ದಷ್ಟ ಪುಷ್ಟವಾಗಿ ಬೆಳೆಸಲಾಗುತ್ತದೆ. ಒಟ್ಟಿನಲ್ಲಿ ಈ ಆಚರಣೆಯ ನೆಪದಲ್ಲಿ ವರ್ಷವಿಡೀ ರೈತನೊಂದಿಗೆ ದುಡಿಯುವ ಎತ್ತುಗಳ ದೇಹಕ್ಕೆ ಒಂದಿಷ್ಟು ವಿಶ್ರಾಂತಿ ಮತ್ತು ಪೌಷ್ಠಿಕ ಆಹಾರ ದೊರೆತಂತಾಗುತ್ತದೆ. ಈ ರೀತಿ ಪ್ರಾಣಿ ಬಗೆಗಿರುವ ಕಾಳಜಿ ಆಚರಣೆಯಲ್ಲಿ ವ್ಯಕ್ತವಾಗುತ್ತದೆ. ಸಂಕ್ರಾಂತಿ ಹಬ್ಬವೂ ಕೂಡ ದನಕರುಗಳಿಗೆ ಸಂಬಂಧಿಸಿದ ಆಚರಣೆ ದನಕರುಗಳಿಗೆ ಮೈತೊಳೆದು, ಕೊಂಬುಗಳಿಗೆ ಬಣ್ಣ ಬಳೆದು ಅಲಂಕರಿಸಿ, ಪೂಜೆ, ಪುನಸ್ಕಾರ ಮಾಡಿ, ಕಿಚ್ಚು ಹಾಯಿಸುತ್ತಾರೆ. ಇದರಿಂದ ದನಕರುಗಳಿಗೆ ಅಂಟಿದ ಉಣ್ಣೆ, ಚಿಕ್ಕಾಡು, ಇತ್ಯಾದಿಗಳು ನಾಶವಾಗುತ್ತವೆ ಎನ್ನುವ ವೈಜ್ಞಾನಿಕ ತಿಳುವಳಿಕೆ ಇತ್ತು. ಇವೆಲ್ಲವೂ ದನಕರುಗಳ ಬಗ್ಗೆ ಕೃಷಿಕನಿಗಿರುವ ಕಾಳಜಿ ತೋರಿಸುತ್ತದೆ. ಈ ಎಲ್ಲ ಆಚರಣೆಯ ಸ್ವರೂಪವನ್ನು ಗಮನಿಸಿದಾಗ ಸಾಮಾನ್ಯವಾಗಿ ಕೃಷಿಕರು ತಾವು ಬಿತ್ತಿ ಬೆಳೆದ ಭೂಮಿಗೆ ಕೃತಜ್ಞತೆಯನ್ನು ಸಲ್ಲಿಸುವಂತಹ ಮನೋಭಾವ, ಬೆಳೆ ಬಂದ ಕಾಲಕ್ಕೆ ತಮ್ಮ ಸಂತಸವನ್ನು ಅಭಿವ್ಯಕ್ತಿಸುವಂತಹ ಸಂದರ್ಭದಲ್ಲಿ (ಸುಗ್ಗಿ ಹಬ್ಬ) ಕೃಷಿಗೆ ಮುಖ್ಯವಾಗಿ ಬೇಕಾದ ಮಳೆ ಬಾರದೆ ಇದ್ದಾಗ ಮಳೆಗಾಗಿ ದೈವವನ್ನು ಪ್ರಾರ್ಥಿಸುವುದು (ಮಳೆದೇವ ಮಾಡುವುದು) ಬೆಳೆ ಮತ್ತು ಜಾನುವಾರುಗಳಿಗೆ ರೋಗ ರುಜಿನಗಳು ಬಂದಾಗ ಅವುಗಳ ನಿವಾರಣೆಗಾಗಿ ದೈವದ ಮೊರೆ ಹೋಗುವಂತದ್ದು ತಮ್ಮ ದುಡಿಮೆಗೆ ಹೆಗಲು ಕೊಟ್ಟು ದಣಿಯುವ ಮೂಕಪ್ರಾಣಿ ಬಸವಣ್ಣನಿಗೆ ಕೈತುರಿಯನ್ನು ತೋರುವುದು ಇತ್ಯಾದಿ ಈ ರೀತಿಯ ಸಂಗತಿಗಳು ಕೃಷಿ ಸಂಬಂಧಿ ಆಚರಣೆಗಳಾಗಿವೆ. ಏನೇ ಇದ್ದರೂ ಇವತ್ತಿನ ಕೃಷಿಯ ಸಾಂಸ್ಕೃತಿಕ ವಲಯದಲ್ಲಿ ಆಚರಣೆಗಳು ನಡೆಯುತ್ತಿವೆ. ಆದರೂ ಆಚರಣೆಗಳನ್ನು ಸಾಂಪ್ರಾದಾಯಿಕವಾಗಿ ನಡೆದುಕೊಂಡು ಬಂದಿವೆ ಎನ್ನುವ ಕಾರಣಕ್ಕೋ ಅಥವಾ ಯಾಂತ್ರೀಕೃತವಾಗಿಯೋ ಇಲ್ಲವೇ ನೆಪಮಾತ್ರ ಇಂದಿಗೂ ಆಚರಣೆ ಮಾಡಿಕೊಂಡು ಬರುತ್ತಿರುವುದು ಕಂಡು ಬರುತ್ತಿದೆ.

**ಪರಾಮರ್ಶನ ಗ್ರಂಥಗಳು**


೧. ಮತ್ತೊಂದು ಮಾನ್ಯರಾಗಿದ್ದಾರೆ – ದೇವಿ ಪ್ರಸಾದ ಚಟ್ಟೋಪಾಧ್ಯಾಯ ೧೯೯೭

೨. ಕೃಷಿ ಆಚರಣೆ – ಮಲ್ಲಿಕಾರ್ಜುನ ಹೊಸಪಾಳ್ಯ. ಪುಸ್ತಕ ಪ್ರಕಾಶನ ೨೦೦೮

೩. ಕೃಷಿ ಸಂಸ್ಕೃತಿ ಕಥನ– ಚಿನ್ನಸ್ವಾಮಿ ವಡ್ಡಗೆರೆ. ಚಿಂತನೆ ಚಿತ್ತಾರ ೨೦೧೯